(ಇಂದು ದಿನಾಂಕಃ 10-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ.ಎಸ ಕೆ ವಕೀಲರಿಂದ :**

1. ನಾನು 10 ನೇ ತರಗತಿಯವರೆಗೆ ಶಾಲೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲಿಷ ಸ್ವಲ್ಪ ಬರುತ್ತದೆ. ಬಾಬಯ್ಯರವರಿಗೆ ಇಂಗ್ಲಿಷ ಓದಲು ಬರೆಯಲು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಾಗಮ್ಮರವರಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬಾಗಮ್ಮರವರು ನನಗೆ ಪರಿಚಯ ಇಲ್ಲ. ನಾನು ಕ್ರಯದ ಕರಾರು ಪತ್ರ ಮಾಡುವಾಗ ಬಾಗಮ್ಮರವರಿಗೆ ಹೇಳಿರುತ್ತೇನಾ ಎಂದರೆ ಸಾಕ್ಷಿ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಬಾಗಮ್ಮರು ಇ ಸಿ ನೋಡದೆ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಇ ಸಿ ಯಲ್ಲಿ ಹೆಸರು ಇದ್ದರೆ ಮಾರಾಟ ಪತ್ರ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಅದು ನಿಮಗೆ ಗೊತ್ತು ಎಂದು ಹೇಳುತ್ತಾರೆ. ಕ್ರಯದ ಕರಾರು ಪತ್ರ ಮಾಡಿದ ನಂತರ ಇಸಿ ಯಲ್ಲಿ ಹೆಸರು ಇದ್ದರೆ ಇನ್ನೊಬ್ಬರಿಗೆ ಕ್ರಯ ಪತ್ರ ಮಾಡಿಕೊಡಲು ಬರುವುದಿಲ್ಲ ಎಂದರೆ ಸಾಕ್ಷಿ ಅದು ನಿಮಗೆ ಗೊತ್ತು ಎಂದು ಹೇಳುತ್ತಾರೆ. ಸಬರೆಜಿಸ್ಟರ ಕಛೇರಿಯವರು ಇಂತಹವರನ್ನು ಕರೆದುಕೊಂಡು ಬನ್ನಿ ಎಂದು ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಬಾಗಮ್ಮರು ಸಲ್ಲಿಸಿದ ಇ ಸಿ ನೋಡಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಾಗಮ್ಮರು ಖರಿದಿ ಮಾಡುವಾಗ 2011 ರಿಂದ 2025 ರವರೆಗೆ ಇ ಸಿ ನೋಡಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರ ಆಗುವ ಬಗ್ಗೆ ನನಗೆ ಗೊತ್ತಿದ್ದರು ಸಹ ನಾನು ಅದನ್ನು ತಡೆಯುವ ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರಲ್ಲಿಲ್ಲಎಂದು ಹೇಳುತ್ತಾರೆ. ಖರೀದಿ ಆದ ನಂತರ ಮ್ಯುಟೇಷನ ಮಾಡಲು ಸುಮರು 45 ದಿನ ಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹೊಡೆಬೀರನ ಹಳ್ಳಿಯಲ್ಲಿ

ನನಗೆ ಪರಿಚಯ ಇರುವವರು ಇದ್ದಾರೆ. ಖರೀದಿ ಆದ ನಂತರ ಮ್ಯುಟೇಷನ ಮಾಡುವಾಗ ಕಂದಾಯ ಇಲಾಖೆಯವರು ನೋಟಿಸ್ಸು ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇಸಿ ಯಲ್ಲಿ ಹೆಸರಿಲ್ಲದದ್ದರು ಸಹ ಖರೀದಿ ಪತ್ರ ಮಾಡಿಕೊಟ್ಟಿದ್ದು ಸಬರೆಜಿಸ್ಟರವರ ತಪ್ಪು ಎಂದರೆ ಸಾಕ್ಷಿ ಒಂದೇ ಹೊಲ ಇಬ್ಬರಿಗೆ ಖರೀದಿ ಕೊಡುವುದು ತಪ್ಪಲ್ಲವೆ ಎಂದು ಹೇಳುತ್ತಾರೆ. 2016 ರರಿಂದ ಇಲ್ಲಿಯವರೆಗೆ ದಾವೆಗಳು ನಡೆದ ಬಗ್ಗೆ ಬಾಗಮ್ಮರವರಿಗೆ ಏನು ಗೊತ್ತಿಲ್ಲ ಎಂದರೆ ಸಾಕ್ಷಿ ಕ್ರಯ ಪತ್ರ ಮಾಡಿಕೊಡುವಾಗ ಗೊತ್ತಾಯಿತು ಎಂದು ಹೇಳುತ್ತಾರೆ. ಬಾಗಮ್ಮರವರು ನೋಂದಣಿ ಖರೀದಿ ಪತ್ರದ ಮುಖಾಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಖರೀದಿಯ ದಿನಾಂಕದಿಂದ ಬಾಗಮ್ಮರವರು ಜಮೀನಿನ ಮಾಲಿಕ ಮತ್ತು ಸ್ವಾಧೀನದಾರರು ಅವರೆ ಇರುತ್ತಾರೆ ಎಂದರೆ ಸರಿ. ನನ್ನ ಹಾಗೂ ಬಾಬಯ್ಯರವರ ನಡುವೆ ಆದ ಒಪ್ಪಂದದ ಬಗ್ಗೆ ಬಾಗಮ್ಮರವರಿಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅವರು ಒಂದೇ ಊರಿನವರು ಆಗಿರುತ್ತಾರೆ ಎಂದು ಹೇಳುತ್ತಾರೆ. ಬಾಗಮ್ಮರವರು ಕಾನೂನು ಬದ್ದವಾಗಿ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರಿಬ್ಬರು ಒಂದೇ ಊರಿನವರು ಆಗಿರುತ್ತಾರೆ ಎಂದು ಹೇಳುತ್ತಾರೆ. ನಾನು ಬಾಗಮ್ಮರವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.